**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 04.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎಲ್ ಎಸ್ ಡಿ ವಕೀಲರಿಂದ :**

ನಾನು ಖಾಯಂ ಆಗಿ ಬಂಟನೂರು ಗ್ರಾಮದಲ್ಲಿ ವಾಸವಾಗಿರುವೆನು. ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದು. ದಾವಾ ಜಮೀನು ಮಾಸಾಳೆರವರಿಗೆ ಸಂಬಂಧಪಟ್ಟಿರುವುದು. ಈ ದಾವೆ ಯಾರು ಯಾವ ಪರಿಹಾರ ಕೋರಿ ದಾಖಲು ಮಾಡಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗಳ ಸರ್ವೇ ನಂಬರ್ ಹಾಗೂ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ದಾವಾ ಜಮೀನುಗಳಿಗೆ ಸಂಬಂಧಪಟ್ಟಂತೆ ಏನು ವ್ಯವಹಾರ ಆಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹಿಂತಿಂತ ವ್ಯವಹಾರ ಆದ ಬಗ್ಗೆ ನಾನು ಹೇಳಿ ಬರೆಸಿರುವುದಿಲ್ಲ. ದಾವಾ ಜಮೀನಿನ ಅಕ್ಕ ಪಕ್ಕದಲ್ಲಿ ನನ್ನ ಮಾಲೀಕತ್ವದ ಜಮೀನುಗಳು ಇರುವುದಿಲ್ಲ, ಆದರೆ ಈ ದಾವಾ ಜಮೀನಿನಲ್ಲಿ ಹಾದು ಮುಂದೆ ಇರುವ ನನ್ನ ಜಮೀನಿಗೆ ಹೋಗುತ್ತೇನೆ. ದಾವಾ ಜಮೀನುಗಳು ವಾದಿಯರೇ ಸಾಗುವಳಿ ಮಾಡುತ್ತಿರುವರು, ನಾನು ಈ ದಾವಾ ಜಮೀನಿನ ಹತ್ತಿರ ಹಾದು ಹೋಗುವುದರಿಂದ ನನಗೆ ಗೊತ್ತಿರುವುದು. ಮೊದಲು ದಾವಾ ಜಮೀನುಗಳನ್ನು ವಾದಿಯರು ಸಾಗುವಳಿ ಮಾಡುತ್ತಿದ್ದರು ಆದರೆ ಈಗ ಪ್ರತಿವಾದಿಯರು ಸಾಗುವಳಿ ಮಾಡುತ್ತಿರುವರು. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ಮೋಸದಿಂದ ದಾವಾ ಜಮೀನುಗಳನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುವರು ಬಗ್ಗೆ ಹೇಳಿ ಬರೆಸಿರುವುದಿಲ್ಲ. ನನಗೆ ದಾವಾ ಜಮೀನಿನ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ವಾದಿಯರಿಗೆ ಅನುಕೂಲವಾಗಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.06.05 10:37:50 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ